# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಸ್ಪೆಷಲ್ ಕೇಸ್ ನಂ. 142/2022**

**ದೋ.ಸಾ. : 7 ಫ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಬೋವಿವಡ್ಡರ |
| ತಂದೆಯ ಹೆಸರು | : | ಹನುಮಂತ ಬೋವಿವಡ್ಡರ |
| ವಯಸ್ಸು | : | 40 ವರ್ಷ |
| ಕೆಲಸ | : | ಚಾಲಕ |
| ವಾಸ | : | ಆಶ್ರಯ ಕಾಲೋನಿ, ಗಾಂಧಿನಗರ, ದಾಂಡೇಲಿ. |

**ದಿನಾಂಕಃ 18-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ದಾಂಡೇಲಿಯ ಆಶ್ರಯ ಕಾಲೋನಿಯಲ್ಲಿ ವಾಸ ಇರುತ್ತೇನೆ. ಮೃತೆ ಸುಶೀಲಾ ನನ್ನ ಚಿಕ್ಕಮ್ಮ ಹಾಗೂ ಆಕೆಯೂ ಸಹಾ ದಾಂಡೇಲಿಯ ಗಾಂಧಿನಗರದ ಆಶ್ರಯ ಕಾಲೋನಿಯಲ್ಲಿ ವಾಸವಾಗಿದ್ದಳು. ಚಾಸಾ-1 ಶೋಭಾ, ಚಾಸಾ-6 ಆನಂದ ಮೃತೆ ಸುಶೀಲಾಳ ಮಕ್ಕಳು. ಸುಶೀಲಾಳ ಮನೆಯಲ್ಲಿ ಆಕೆಯ ತಂದೆ-ತಾಯಿ ಮತ್ತು ಮಕ್ಕಳು ವಾಸವಾಗಿದ್ದರು. ಶೋಭಾಳಿಗೆ ಮದುವೆ ಆದ ನಂತರ ಆಕೆ ಯಲ್ಲಾಪುರದಲ್ಲಿ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಳು. ಆನಂದ ಸಹಾ ಮದುವೆಯಾದ ಮೇಲೆ ತನ್ನ ಹೆಂಡತಿಯೊಂದಿಗೆ ಗಾವುಟಾನದಲ್ಲಿ ವಾಸವಾಗಿದ್ದ ಹಾಗೂ ಆತ ಗೌಂಡಿ ಕೆಲಸ ಮಾಡುತ್ತಿದ್ದ. ಮೃತೆ ಸುಶೀಲಾಳು ಪರಿಶಿಷ್ಟ ಜಾತಿಯ ಬೋವಿವಡ್ಡರ ಜನಾಂಗಕ್ಕೆ ಸೇರಿದವಳಾಗಿರುತ್ತಾಳೆ. ಈ ಪ್ರಕರಣದ 2 ನೇ ಆರೋಪಿ ಸಹಾ ಸುಶೀಲಾಳ ಮನೆಯ ನಂತರದ 1 ನೇ ಬೀದಿಯಲ್ಲಿ ವಾಸವಾಗಿದ್ದ. ನನಗೆ ಆತನ ಪರಿಚಯ ಇರುತ್ತದೆ. ಅವನು ಸಹಾ ಪರಿಶಿಷ್ಟ ಜಾತಿಗೆ ಸೇರಿದವನು. ಮೃತೆ ಸುಶೀಲಾಳು ಮೊದಲಿಗೆ ಕೂಲಿ ಕೆಲಸ ಮಾಡುತ್ತಿದ್ದಳು ಹಾಗೂ ನಂತರದಲ್ಲಿ ಜೋಯಿಡಾ ತಾಲೂಕಿನ ಪೋಟೋಳಿಯ ನೇಚರ ನೆಸ್ಟ ಹೋಮ್ ಸ್ಟೇನಲ್ಲಿ ಪಾತ್ರೆ ತೊಳೆಯುವ ಹಾಗೂ ಕಸ ತೆಗೆಯುವ ಕೆಲಸಕ್ಕೆ ಸೇರಿಕೊಂಡಿದ್ದಳು. ಸದರಿ ಹೋಮ ಸ್ಟೇನಲ್ಲಿ ಸುಶೀಲಾಳಿಗೆ ಉಳಿದುಕೊಳ್ಳಲು ಪ್ರತ್ಯೇಕ ರೂಮ್ ನೀಡಲಾಗಿತ್ತು. 2 ನೇ ಆರೋಪಿ ಸಹಾ ಸದರಿ ಹೋಮ್ ಸ್ಟೇನಲ್ಲಿ ಕೆಲಸ ಮಾಡುತ್ತಿದ್ದ.

ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನಗೆ ಗೊತ್ತು, ಆತ ರೆಡ್ಡಿ ಜನಾಂಗಕ್ಕೆ ಸೇರಿದ್ದು, ಅವನೂ ಸಹಾ ಸದರಿ ಹೋಮ್ ಸ್ಟೇನಲ್ಲಿ ಕೆಲಸ ಮಾಡುತ್ತಿದ್ದ. ಮೃತೆ ಸುಶೀಲಾಳು ಬೋವಿವಡ್ಡರ ಜನಾಂಗಕ್ಕೆ ಸೇರಿದವಳು ಎಂದು 1 ನೇ ಆರೋಪಿಗೆ ಗೊತ್ತಿರುತ್ತದೆ.

2. ದಿನಾಂಕಃ 26.08.2022 ರಂದು ಬೆಳಿಗ್ಗೆ 11:00 ಘಂಟೆಗೆ ನಾನು ನಮ್ಮ ಮನೆಯ ಬಳಿ ಇದ್ದಾಗ, 2 ನೇ ಆರೋಪಿ ನನಗೆ ಫೋನ್ ಮಾಡಿ, ಸುಶೀಲಾಳಿಗೆ ಹೃದಯಾಘಾತ ಆಗಿ ಮೃತಪಟ್ಟಿರುತ್ತಾಳೆ, ಆಕೆಯ ಶವವನ್ನು ನಾನು ಆ್ಯಂಬುಲೆನ್ಸನಲ್ಲಿ ತೆಗೆದುಕೊಂಡು ಬರುತ್ತಿದ್ದೇನೆಂದು ಹೇಳಿರುತ್ತಾನೆ. ಸುಮಾರು ಬೆಳಿಗ್ಗೆ 11:30 ಘಂಟೆಗೆ 2 ನೇ ಆರೋಪಿಯು ಮೃತ ಸುಶೀಲಾಳ ಶವವನ್ನು ಆಕೆಯ ಮನೆಯ ಬಳಿ ತಂದಿದ್ದು, ಆ್ಯಂಬುಲೆನ್ಸನಿಂದ ಶವವನ್ನು ಕೆಳಗೆ ಇಳಿಸಿ ನೋಡಿದಾಗ, ಶವದ ಕುತ್ತಿಗೆಯ ಸುತ್ತ ಕಪ್ಪನೆಯ ಬಿಗಿದ ಗುರುತು ಇತ್ತು ಮತ್ತು ಕಾಲಿನ ಹಿಮ್ಮಡಿಯ ಬಳಿ ಚುಚ್ಚಿದ ಗಾಯ ಇದ್ದು, ರಕ್ತದ ಕಲೆ ಇತ್ತು. ಆದ್ದರಿಂದ ಆಕೆಯ ಕೊಲೆ ಆಗಿದೆ ಎಂದು ನಮಗೆ ಅನುಮಾನ ಬಂದು ಶವವನ್ನು ಅದೇ ಆ್ಯಂಬುಲೆನ್ಸನಲ್ಲಿ ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ಈ ವಿಷಯವನ್ನು ನಾನು ಚಾಸಾ–1 ಮತ್ತು 6 ರವರಿಗೆ ಫೋನ್ ಮಾಡಿ ಹೇಳಿರುತ್ತೇನೆ.

3. ನಂತರ ಚಾಸಾ–1 ರವರು ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಬಳಿ ಬಂದು, ತನ್ನ ತಾಯಿಯ ಶವವನ್ನು ನೋಡಿ, ನನ್ನ ಬಳಿ ಏನಾಯಿತು ಎಂದು ಕೇಳಿದಳು, ಆಗ ನಾನು ನನ್ನ ಮುಂದೆ ನಡೆದ ವಿಷಯವನ್ನು ತಿಳಿಸಿರುತ್ತೇನೆ. ನಂತರ ಚಾಸಾ–1 ರವರು ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ನಂತರ ಚಾಸಾ–6 ರವರು ಸಹಾ ಸಂಜೆ ಆಸ್ಪತ್ರೆಗೆ ಬಂದಿರುತ್ತಾನೆ. ನಂತರ ಪೊಲೀಸರು ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಬಂದು, ಶವಾಗಾರದಲ್ಲಿ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ನಂತರದಲ್ಲಿ 1 ನೇ ಆರೋಪಿಯು ಮೃತ ಸುಶೀಲಾಳೊಂದಿಗೆ ಲೈಂಗಿಕ ಕೃತ್ಯ ಎಸಗಲು ಪ್ರಯತ್ನಿಸಿದ್ದು, ಆಕೆಯು ನಿರಾಕರಿಸಿದ್ದರಿಂದ ಹಾಗೂ ಈ ವಿಷಯವನ್ನು ಹೋಮ್ ಸ್ಟೇ ಮಾಲೀಕರಿಗೆ ತಿಳಿಸುವುದಾಗಿ ಹೇಳಿದ್ದರಿಂದ, ಸಿಟ್ಟಿನಿಂದ ಆಕೆಯ ಕುತ್ತಿಗೆಗೆ ಬಿಗಿದು ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಯಿತು. 2 ನೇ ಆರೋಪಿಯು ಮೃತೆ ಸುಶೀಲಾಳ ಕೊಲೆ ಆಗಿದ್ದರೂ ಸಹಾ ಆಕಗೆ ಹೃದಯಾಘಾತ ಆಗಿದೆ ಎಂದು ಸುಳ್ಳು ಹೇಳಿ, ಶವವನ್ನು ಆ್ಯಂಬುಲೆನ್ಸ ಮೂಲಕ ತಂದಿರುತ್ತಾನೆ ಎಂದು ತಿಳಿಯಿತು. ಸದರಿ ಘಟನೆಯು ದಿನಾಂಕಃ 25.08.2022 ರಂದು ರಾತ್ರಿ 1.00 ರಿಂದ 2.00 ಘಂಟೆ ನಡುವೆ ನೇಚರ ನೆಸ್ಟ

ಹೋಮ್ ಸ್ಟೇನಲ್ಲಿ ನಡೆದಿರುತ್ತದೆ ಎಂದು ತಿಳಿಯಿತು. ಆ ನಂತರ ಪೊಲೀಸರು 1 ಮತ್ತು 2 ನೇ ಆರೋಪಿತರನ್ನು ದಸ್ತಗಿರಿ ಮಾಡಿರುತ್ತಾರೆ ಎಂದು ತಿಳಿಯಿತು. ಈ ಬಗ್ಗೆ ನಾನು ದಾಂಡೇಲಿಯ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ–19 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–19(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಮೃತೆ ಸುಶೀಲಾಳ ಶವವನ್ನು ಸಾಕ್ಷಿಯು 2 ಪೋಟೋಗಳನ್ನು ನೋಡಿ ಗುರುತಿಸಿದ್ದಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ( ಈ ದಿನ 2 ನೇ ಆರೋಪಿ ಗೈರು ಹಾಜರಿದ್ದು, ಆತನ ಪರ ವಕೀಲರು ಆತನನ್ನು ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.)

(ನ್ಯಾಯಾಲಯದ ಪೂರ್ವಾಹ್ನದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮದ್ಯಾಹ್ನ 2.45 ಘಂಟೆಗೆ ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ

**ಸಾಕ್ಷಿಯನ್ನು ಪುನಃ ಮದ್ಯಾಹ್ನ 3.00 ಘಂಟೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಎಲ್.ಎ.ಡಿ.ಸಿ ರವರಿಂದ**

4. ಮೃತೆ ಸುಶೀಲಾಳ ಗಂಡ ಆಕೆಯ ಜೊತೆಯಲ್ಲಿ ಇರಲಿಲ್ಲ. ನನ್ನ ಚಿಕ್ಕಮ್ಮಳಿಗೆ ಸರಾಯಿ ಕುಡಿಯುವ ಅಭ್ಯಾಸ ಇರಲಿಲ್ಲ. ನನ್ನ ಚಿಕ್ಕಮ್ಮ ಕೆಲಸ ಮಾಡುತ್ತಿದ್ದ ಜಾಗದಲ್ಲಿ ಬೇರೆ ಹೆಂಗಸರು ಕೆಲಸ ಮಾಡುತ್ತಿದ್ದರೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಮ್ಮ ಅನಾರೋಗ್ಯದಿಂದ ಒಂದು ವರ್ಷ ಕಾಲ ಕೆಲಸ ಬಿಟ್ಟಿದ್ದಳು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ಮಕ್ಕಳು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲದ ಕಾರಣ ಹೋಮ ಸ್ಟೇನಲ್ಲಿ ಕೆಲಸ

ಮಾಡುತ್ತಿದ್ದಳು ಎಂದರೆ ಸರಿಯಲ್ಲ. ದಾಂಡೇಲಿಯಲ್ಲಿರುವ ನನ್ನ ಚಿಕ್ಕಮ್ಮನ ಮನೆಯ ಅಕ್ಕಪಕ್ಕ ಬಹಳಷ್ಟು ಜನ ಇರುತ್ತಾರೆ ಎಂದರೆ ಸರಿ. 1 ನೇ ಆರೋಪಿತನನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ಯಾವಾಗ ಕೆಲಸಕ್ಕೆ ಹೋಗುತ್ತಿದ್ದಳು ಹಾಗೂ ಯಾವಾಗ ಬರುತ್ತಿದ್ದಳು ಎಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಮನ ಶವ ನೋಡಿದಾಗ ಆಕೆಯ ಕುತ್ತಿಗೆಯ ಬಳಿ ಯಾವುದೇ ಗುರುತು ಇರಲಿಲ್ಲ ಹಾಗೂ ಹಿಮ್ಮಡಿ ಬಳಿ ಯಾವುದೇ ಗಾಯ ಇರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಯಾವುದೇ ಶವ ಪಂಚನಾಮೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ನಾನು ಯಾವುದೇ ವಿಷಯವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ಯಾವ ಜಾತಿಗೆ ಸೇರಿದಳು ಎಂದು 1 ನೇ ಆರೋಪಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತಳು ನನ್ನ ಚಿಕಮ್ಮ ಆದ ಕಾರಣ ದಾಂಡೇಲಿ ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆಯನ್ನು ನೀಡಿ, ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ಮೇಲೆ 1 ನೇ ಆರೋಪಿ ಲೈಂಗಿಕ ಕೃತ್ಯ ಎಸಗಲು ಪ್ರಯತ್ನಿಸಿರುತ್ತಾನೆ ಎಂದು ಯಾರು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ಮಕ್ಕಳು ಆಕೆಯನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಆಕೆಯು ಮಾನಸಿಕ ಖಿನ್ನತೆಗೆ ಒಳಗಾಗಿ ತಾನೇ ಸ್ವತಃ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿ.ಎ.ಟಿ ವಕೀಲರಿಂದ**

(ಈ ಹಂತದಲ್ಲಿ 2 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ರೂ. 500/- ಗಳ ಖರ್ಚು ನೀಡುವ ಷರತ್ತಿಗೆ ಒಳಪಟ್ಟು ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ